ಅದನ್ನೇ ಯೋಚಿಸುತ್ತಾ ಸ್ಟೇಷನ್‌ಗೆ ಬಂದವನು ಸೀದಾ ಎಸ್‌ಐ ಬಳಿಗೆ ಹೋದ.

ಸೆಲ್ಯೂಟ್ ಹೊಡೆದು, "ಸರ್, ಡಿವೈಎಸ್ಪಿ ಅವರ ಆಫೀಸ್‌ನಲ್ಲಿ ಡ್ಯೂಟಿ ಮಾಡಬೇಕಂತೆ ಸರ್" ಎಂದು ನಿಂತ.

"ಹೂಂ, ಕಣ್ಲಾ. ಅಲ್ಲೇ ಡ್ಯೂಟಿ ಮಾಡು. ಆ ಬೋಳಿ ಮಗ ಡಿವೈಎಸ್ಪಿ ಸ್ವಲ್ಪ ಐಲು. ಬರದೇ ಇರೋ ಇಂಗ್ಲೀಷ್ನಾಗೆ ಏನೇನೋ ಬಡಕತಿರ್ತಾನೆ. ಉಸಾರಪ್ಪ. ಈಗ ಸೂಳೆ ಮಗ ಎಸ್‌ಪಿ ಕಾಟ ಬೇರೆ. ಅದಕ್ಕೆ ಕನ್ನಡ ಬರಲ್ಲ. ಇದಕ್ಕೆ ಇಂಗ್ಲೀಸ್ ಬರಲ್ಲ. ಇವರ ನಡುವೆ ನಾವು ಚಪಾತಿ ಕಣ್ಲಾ ಮಾದೇಶ" ಎಂದರು.

ಈ ಎಸ್‌ಐ ಮಾದೇಶನಿಗೆ ಇಷ್ಟ ಆಗಿದ್ದರು. ರಿಟೈರಾಗೋಕೆ ಆರು ತಿಂಗಳಿತ್ತು. ನೋಡೋಕೆ ಅವನ ಚಿಕ್ಕಪ್ಪನ ಹಾಗೆ ಇದ್ದರು. ಪೊಲೀಸ್ ಆಗಿ ಎಸ್‌ಐ ತನಕ ಬಂದಿದ್ದವರು. ಹಾಗಾಗಿ ಸ್ವಲ್ಪ ಗತ್ತು ಕಡಿಮೆ. ಆದರೂ ಮಾದೇಶ ಇಲ್ಲಿಗೆ ಬರೋಕ ಮುಂಚೇನೇ ಹುಷಾರಾಗಿರುವ ನಿರ್ಧಾರ ಮಾಡಿಯೇ ಬಂದಿದ್ದ.

ಮಾದೇಶ ಪೊಲೀಸ್ ಡ್ಯೂಟಿಗೆ ಸೇರಿ ಐದು ವರ್ಷಗಳಾಗಿದ್ದವು. ಒಂದು ಬಾರಿ ಸಸ್ಪೆಂಡ್ ಆಗಿದ್ದ. ಆಗ ಆಗಿದ್ದು ಇಷ್ಟು. ಮಾದೇಶನಿಗೆ ತನ್ನ ಇಂಗ್ಲಿಷ್ ಮೇಲೆ ತುಂಬಾ ವಿಶ್ವಾಸ. ಅದರಲ್ಲೂ ಅವನ ಉಚ್ಚಾರಣೆಯನ್ನಂತೂ ಕೇಳೋದೇ ಬೇಡ. ಹಾಗಾಗಿ, ಕೆಲಸದ ಆರಂಭದಲ್ಲಿ ಎಲ್ಲರ ಇಂಗ್ಲಿಷ್ ತಿದ್ದುವ ಹೊಣೆಯನ್ನು ತನಗೆ ತಾನೇ ಹೊತ್ತುಕೊಂಡು ಬಿಟ್ಟಿದ್ದ. ಯಾರೇ ಆಗಲಿ, ಇಂಗ್ಲಿಷ್ ಬಳಸುವಾಗ ತಪ್ಪು ಉಚ್ಚಾರಣೆ ಮಾಡಿದರೆ, ಮುಗಿಯಿತು. ನೇರವಾಗಿ ಅವರ ಮುಖಕ್ಕೆ ಹೇಳುತ್ತಿದ್ದ – ನೀವು ಬಳಸಿದ್ದು ತಪ್ಪು ಇಂಗ್ಲಿಷ್ ಅಂತ. ಅವನು ಸೌಜನ್ಯದಿಂದಲೇ ಅದನ್ನು ಹೇಳುತ್ತಿದ್ದರೂ, ವಯಸ್ಸಿನಲ್ಲಿ ಮತ್ತು ವೃತ್ತಿಯಲ್ಲಿ ಹಿರಿಯರಾಗಿದ್ದ ಅನೇಕರಿಗೆ ಅದರಿಂದ ಕಿರಿಕಿರಿ ಅಂತೂ ಆಗಿತ್ತು. ಸರಿಯಾದ ಭಾಷೆಯನ್ನು ಬಳಸುವ ಉತ್ಸಾಹದಲ್ಲಿ ಅವನು ಅದನ್ನೆಲ್ಲಾ ಗಮನಿಸಲು ಹೋಗುತ್ತಿರಲಿಲ್ಲ.

ಇದಕ್ಕೆ ಕಾರಣ ಅವನ ರೆಡ್ಡಿ ಸರ್. ಅವರು ಇವನ ಡಿಗ್ರಿ ಮೇಷ್ಟ್ರು. ಯಾವುದೇ ಭಾಷೆಯನ್ನು ಸರಿಯಾದ ರೀತಿಯಲ್ಲಿ ಬಳಸಬೇಕು ಎಂದು ನಂಬಿದ್ದವರು. ಮಾದೇಶನೂ ಅಷ್ಟೇ. ಮೊದಲಿಂದಲೂ ತನ್ನ ಕನ್ನಡದ ಬಗ್ಗೆ ಎಚ್ಚರದಿಂದ ಇದ್ದವನು. ಯಾವುದೇ ಕಾರಣಕ್ಕೂ 'ಸ', 'ಅ', 'ಹ', 'ಪ', 'ಫ' ಶಬ್ದಗಳನ್ನು ವ್ಯತ್ಯಾಸ ಮಾಡಿದವನಲ್ಲ. ರೆಡ್ಡಿ ಸರ್ ಅಂತೂ ಅವನ ಕೈಗೆ ಆಕ್ಸ್‌ಫರ್ಡ್ ಲರ್ನರ್ ಡಿಕ್ಷನರಿ ನೀಡಿ, ಬೆನ್ನುತಟ್ಟಿದ್ದರು. ಎರಡು ವರ್ಷ ಮಾದೇಶ ಮಾಡಿದ್ದು ಒಂದೇ ಕೆಲಸ. ಡಿಕ್ಷನರಿನಲ್ಲಿ ಇರೋ ಬಹುತೇಕ ಎಲ್ಲಾ ಪದಗಳ ಸರಿಯಾದ ಉಚ್ಚಾರಣೆ ಕಲಿಯುವುದು. ಡಿಗ್ರಿ ಮುಗಿಯೋ ಹೊತ್ತಿಗೆ ಪಟಪಟ ಇಂಗ್ಲಿಷ್ ಮಾತಾಡೋದು ಸಾಧ್ಯವಾಗಿತ್ತು. ರೆಡ್ಡಿ ಸರ್ ಒತ್ತಾಸೆ ಮೇರೆಗೆ ಎಂ.ಎ. ಇಂಗ್ಲಿಷ್‌ಗೆ ಸೇರಿದ.

ಜೊತೆಯಲ್ಲಿರೋ ಹುಡುಗ್ರು ಅರ್ಜಿ ಹಾಕಿದ್ದನ್ನು ನೋಡಿ ತಾನು ಪೊಲೀಸ್ ಹುದ್ದೆಗೆ ಅರ್ಜಿ ಹಾಕಿದ್ದ. ಮೊದಲಿಂದಲೂ ಜಮೀನು ಕೆಲಸ ಮಾಡೋ ಅಭ್ಯಾಸ ಇದ್ದ ಕಾರಣ ದೈಹಿಕ ಪರೀಕ್ಷೆ ಪಾಸಾಗೋದು ಕಷ್ಟ ಆಗಲಿಲ್ಲ. ಲಿಖಿತ ಪರೀಕ್ಷೆ ಕೂಡ ಪಾಸಾಯಿತು. ಕೊನೆಗೆ ಡ್ಯೂಟಿ ಆರ್ಡರ್ ಕೂಡ ಬಂತು. ಇಂಗ್ಲಿಷ್ ಎಂ.ಎ. ಬಿಡೋದು ಅವನಿಗೆ ಕಷ್ಟವಾಯಿತು.

ರೆಡ್ಡಿ ಸರ್ ಅವರ ಬಳಿ ಹೋದಾಗ ಅವರು, "ಮಾದೇಶ, ಕೆಲಸಕ್ಕೆ ಹೋಗೋದೆ ಬೆಸ್ಟ್, ಕಣ್ರೀ. ಎಂ.ಎ. ಆದ ಮೇಲೂ ಕೆಲಸಗಳು ಗ್ಯಾರಂಟಿ ಇಲ್ಲ. ಕಾಲೇಜುಗಳಿಗೆ ನೇಮಕಾತಿಗಳು ಆಗಿ ತುಂಬಾ ವರ್ಷಗಳಾಗಿವೆ. ಕೆಲ್ಸಕ್ಕೆ ಹೋಗೋದು ಒಳ್ಳೇದು. ಕರೆಸ್ಪಾಂಡೆನ್ಸ್ ಮೂಲಕ ಎಂ.ಎ. ಮುಗಿಸ್ರಿ" ಅಂದರು.

ಮಾದೇಶನ ಚಿಕ್ಕಪ್ಪ ಕೂಡ ನೋಡಪ್ಪ ಯೋಚನೆ ಮಾಡು ಅಂದರು. ಅಪ್ಪನ ಗೂರಲು ರೋಗ